ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 92/2011**

**ಫ್ರಾಸಾ- 69 ಚಾಸಾ- 109**

ಸಾಕ್ಷಿದಾರರ ಹೆಸರುಃ : ಕುಬೇರಪ್ಪ

ತಂದೆಯ ಹೆಸರುಃ : ಸಿ ಸಣ್ಣಬಸಪ್ಪ

ವಯಸ್ಸುಃ : 68 ವರ್ಷ

ಉದ್ಯೋಗಃ : ನಿವೃತ್ತ ಡಿಸಿಟಿ

ವಾಸ : ದಾವಣಗೆರೆ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 12-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಜುಲೈ 2009ರಿಂದ ಡಿಸೆಂಬರ್ 2009ರವರೆಗೆ ನಾನು ಹಾಸನದ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಕರ್ನಾಟಕ ಲೋಕಾಯುಕ್ತ ಚಿಕ್ಕಮಗಳೂರು ಇದರ ಪೊಲೀಸ್ ಉಪಾಧೀಕ್ಷಕರು ದಿನಾಂಕ 20-7-2009ರಂದು ಪತ್ರ ಬರೆದು ಸಿ.ಎಸ್.ರಂಗಸ್ವಾಮಿ ಎಂಬುವವರು ಹೊಂದಿರುವ ಚಾಲನಾ ಪರವಾನಿಗೆ ಮಾಹಿತಿ ನೀಡುವಂತೆ ಕೇಳಿದ್ದರು. ಆ ಪ್ರಕಾರವಾಗಿ ನಾನು ಮಾಹಿತಿಯನ್ನು ಅದೇ ದಿನಾಂಕದಂದು ನಿಪಿ-126ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-126(ಎ) ಎಂದು ಗುರುತಿಸಲಾಯಿತು.

3.ಅದೇ ರೀತಿ ದಿನಾಂಕ 17-8-2009ರಂದು ಕೆಎ-13-ಕೆ-1866ರ ಮೋಟಾರ್ ಸೈಕಲ್ ಗೆ ಸಂಬಂಧಪಟ್ಟ ತೆರಿಗೆ ಮತ್ತಿತರ ಮಾಹಿತಿ ನೀಡುವಂತೆ ಕೇಳಿದ್ದರು. ಆ ಪ್ರಕಾರವಾಗಿ ನಾನು

ಮಾಹಿತಿಯನ್ನು 14-9-2009ರಂದು ನಿಪಿ-127ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-127(ಎ) ಎಂದು ಗುರುತಿಸಲಾಯಿತು.

4.ಅದೇ ರೀತಿ ದಿನಾಂಕ 17-8-2009ರಂದು ಕೆಎ-13-ಕ್ಯೂ-8626ರ ಮೋಟಾರ್ ಸೈಕಲ್ ಗೆ ಸಂಬಂಧಪಟ್ಟ ತೆರಿಗೆ ಮತ್ತಿತರ ಮಾಹಿತಿ ನೀಡುವಂತೆ ಕೇಳಿದ್ದರು. ಆ ಪ್ರಕಾರವಾಗಿ ನಾನು ಮಾಹಿತಿಯನ್ನು 14-9-2009ರಂದು ನಿಪಿ-128ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-128(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಜೆ ಪಿ ಎಸ್ ವಕೀಲರಿಂದಃ**

ನಾನು ಸಿ ಆರ್ ಮಂಜುನಾಥ್ ಎಂಬುವವರಿಗೆ ಸೇರಿದಂತೆ ದಾಖಲೆ ಕೊಟ್ಟಿದ್ದೇನೆ ಎಂದರೆ ಸರಿ. ನಿಪಿ-127 ಮತ್ತು 128ರಲ್ಲಿ ಕಾಣಿಸಿದ ಎರಡೂ ವಾಹನಗಳು 2009-10ರಲ್ಲಿ ಸಿ ಎಸ್ ರಂಗಸ್ವಾಮಿ ರವರ ಹೆಸರಿನಲ್ಲಿ ಇರಲಿಲ್ಲ, 2005ರಲ್ಲಿಯೇ ಮಾರಾಟವಾಗಿತ್ತು ಎಂದರೆ ಸರಿಯಲ್ಲ. ಈ ವಾಹನಕ್ಕೆ ಸಂಬಂಧಪಟ್ಟ ಸೂಕ್ತ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿ ವರದಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ದಿನಾಂಕ 4-1-2008ರಂದು ದಾಖಲೆಗಳನ್ನು ನೀಡಿರುತ್ತೇನೆಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. 14-9-2009ರಂದು ದಾಖಲೆಗಳನ್ನು ಒದಗಿಸಿರುವುದು ಎಂದು ಹೇಳಿಲ್ಲ ಎಂದರೆ ಸರಿ. ನನ್ನ ಅವಧಿಯಲ್ಲಿ ಆ ವಾಹನಕ್ಕೆ ಸಂಬಂಧಪಟ್ಟ ತೆರಿಗೆ ವ್ಯವಹಾರ ನಡೆದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**